ಶ್ರೀ ಜ್ಞಾನದೇವ ದೊಡ್ಡ ಮೇಟಿ.—ಒಳ್ಳೆಯ ರಾಸುಗಳು ವಧಾಲಯಕ್ಕೆ ಹೋಗುತ್ತಿದೆ ಅದು ತಪ್ಪಂಗೂ ಗೊತ್ತಿದೆ. ಇದರ ಬಗ್ಗೆ ಕೇಸ್ ಹಾಕಿದ್ದಾರೋ ಇಲ್ಲವೋ ಗೊತ್ತಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈ ವಧೆಯಿಂದ ಒಳ್ಳೆಯ ರಾಸುಗಳು ನಾಶವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಎಂದು ನಾನು ಪ್ರಶ್ನೆ ಕೇಳಿದ್ದೇನೆ ಅದಕ್ಕೆ ಉತ್ತರವಾಗಿ ಬಂದಿಲ್ಲವೆಂದು ಹೇಳಿದ್ದಾರೆ. ಒಳ್ಳೆಯ ರಾಸುಗಳು ವಧಾಲಯಕ್ಕೆ ಹೋಗುತ್ತಿವೆ ಆದರೆ ಅದರ ಬಗ್ಗೆ ತಪ್ಪಂಗೆ ಮಾಹಿತಿಯನ್ನು ಕೊಟ್ಟಿಲ್ಲ ಅಂದಮೇಲೆ ಒಳ್ಳೆಯ ರಾಸುಗಳ ವಧೆಯಾಗುತ್ತಿರುವ ಬಗ್ಗೆ ಕೇಸ್ ಹಾಕಿರ ಬಹುದು ಇಲ್ಲವೇ ಹಾಕಿಲ್ಲದೇ ಇರಬಹುದು ಆದರೆ ಅದೂ ಕೂಡ ತಪ್ಪಂಗೆ ಗೊತ್ತಿಲ್ಲ. ಒಳ್ಳೆಯ ರಾಸು ಗಳು ಇವತ್ತು ನಾಶವಾಗುತ್ತಿವೆ ಅದನ್ನು ತಡೆಗಟ್ಟಲು ಜರೂರಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಒಮ್ಮೆ ಸಂತೆಯೊಳಗೆ ತಿರುಗಾಡಿ ಬನ್ನಿ ಆಗ ನಿಜಾಂಶ ನಿಮಗೆ ಗೊತ್ತಾಗುತ್ತದೆ. ನರೇಗಲ್‌ನಿಂದ ಗದಗ್‌ಗೆ ಹೋಗಬೇಕಾದರೆ ಆ ಹಾದಿಯಲ್ಲಿ ಬಹಳ ಉತ್ತಮವಾದ ರಾಸುಗಳು ಹೋಗುತ್ತವೆ ಇದನ್ನು ತಾವು ನೋಡಬಹುದು.ನಾನು ಉದಾಹರಣೆಗೆಂದು ಇದನ್ನು ಹೇಳಿದ್ದೇನೆ. ನಾರಾಯಣಪುರ ಎಂಬಲ್ಲಿ ಸಾವಿರಾರು ದನಗಳು, ಕರುಗಳು ರಾತ್ರಿ ಹೊತ್ತು ಮಂಚಾಜಾವಿನಲ್ಲಿ ಹೋಗುತ್ತವೆ. ಅದು ಮಾನ್ಯ ಕೆ. ಹೆಚ್. ಪಾಟೀಲರಿಗೂ ಕೂಡಾ ಗೊತ್ತಿದೆ. ಉತ್ತಮ ರಾಸುಗಳು ನಾಶವಾಗುತ್ತಿವೆ. ಮಾನ್ಯ ಮಂತ್ರಿಗಳು ಕೊಟ್ಟಿರ ತಕ್ಕಂಥ ಅಂಕಿ ಸಂಖ್ಯೆಯನ್ನು ನೋಡಿದರೆ ಬಹುತೇಕವಾಗಿ ಯಾರೂ ದನಗಳನ್ನು ತಿನ್ನುವುದಿಲ್ಲವೇನೋ ಎನ್ನುವ ಹಾಗೆ ಇದೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಅಧ್ಯಕ್ಷರೇ, ಈ ಆಕ್ಟ್‌ನ್ನು ಜಾರಿಗೆ ತರಬೇಕಾಗಿರುವುದು ಪೋಲೀಸ್ ಇಲಾಖೆಯವರು, ಪೋಲೀಸ್ ಇಲಾಖೆಯವರಿಗೆ ಇಂಥ ವಿಚಾರಗಳ ಬಗ್ಗೆ ಅದಷ್ಟು ಜಾಗ್ರತೆ ಇರಬೇಕು ಮತ್ತು ಉತ್ತಮವಾದ ರಾಸುಗಳನ್ನು ಪ್ರಾಣಿಗಳನ್ನು ಎಲ್ಲೇ ಆಗಲಿ ಕಡೆಯ ಬಾರದು ಎನ್ನುವ ಬಗ್ಗೆ ಆದೇಶ ನೀಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ವೇದಾಂತ ಹೆಬ್ಬಾಗಿ.—ಈ ಪ್ರಾಣಿ ವಧೆ ಮಾಡುವವರು ಎಂಥವರು ಇರಬೇಕು ? ಅವರಿಗೆ ಕ್ವಾಲಿಫಿಕೇಷನ್ ಇದರ ಬಗ್ಗೆ ಏನಾದರೂ ಇದೆಯೇ ? ಎರಡನೆಯದು ಈ ಪ್ರಾಣಿ ವಧೆ ಮಾಡುವುದಕ್ಕೆ ನೂತನವಾಗಿ ಆಧುನಿಕವಾಗಿ ಎಲ್ಲಿಯಾದರೂ ಕೂಡಾ ಯಂತ್ರಗಳನ್ನು ಜೋಡಿಸಿದ್ದೀರಾ ? ಮೂರನೆಯದು ಈ ವಧೆ ಮಾಡುವ ಪ್ರಾಣಿಗಳಲ್ಲಿ ಯಾವ ಪ್ರಾಣಿಯ ಮಾಂಸ ರುಚಿ ಜಾಸ್ತಿ ?

ಶ್ರೀ ಮೊಹಮ್ಮದ್ ಮೊಹಿನುದ್ದೀನ್.—ಸ್ವಾಮಿ, ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ನೀಡುತ್ತೇನೆ.

ಉಪಾಧ್ಯಕ್ಷರು.—ಶ್ರೀ ವಿನಯಕುಮಾರ್ ಸೊರಕೆ.—ಗೈರುಹಾಜರಿ—

ಶ್ರೀ ರಂಗದೇವರಾಯಲು.—ಗೈರುಹಾಜರಿ—

ಹರಪನಹಳ್ಳಿಯಲ್ಲಿರುವ ಪಶುವೈದ್ಯಶಾಲೆಯನ್ನು ಮೇಲ್ದರ್ಜೆಗೇರಿಸುವುದು

೨೦೫೯ ಶ್ರೀ ಬಿ ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ವಕ್ಫ್ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತೆಲಗಿ ಮತ್ತು ಕವಿತಹಳ್ಳಿ ಗ್ರಾಮಗಳಲ್ಲಿರುವ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—(ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ಇಲ್ಲ. (ಸರ್ಕಾರದ ಪರಿಶೀಲನೆಯಲ್ಲಿಲ್ಲ)

ಶ್ರೀ ಬಿ. ಹೆಚ್. ಯಂಕಾನಾಯಕ್.— ಮಾನ್ಯ ಉಪಾಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ "ಸರ್ಕಾರದ ಪರಿಶೀಲನೆಯಲ್ಲಿಲ್ಲ" ಎಂದು ಹೇಳಿದ್ದಾರೆ. ಈ ಆಸ್ಪತ್ರೆ ಓಪನ್ ಆಗಿದ್ದು ೧೯೬೮-೬೯ನೇ ಈ ಆಸ್ಪತ್ರೆಗಳು ಸರ್ಕಾರದ ಲೆಕ್ಕದಲ್ಲಿಲ್ಲವೇ ? ಡಿ. ಸಿ. ಲೆಕ್ಕದಲ್ಲಿ ಏನಾದರೂ ಇದೆಯೇ ? ಉತ್ತರದ

ಇಲ್ಲ ಎಂದು ಹೇಳಿದ್ದಾರೆ. ಅಲ್ಲಿಗೆ ಒಬ್ಬ ಇನ್ಸ್‌ಪೆಕ್ಟರನ್ನು ಹಾಕಿದ್ದಾರೆ. ಅವರಿಗೆ ೨೦ ವರ್ಷ ಆದರೂ ಟ್ರಾನ್ಸ್‌ಫರ್ ಇಲ್ಲ. ಇದು ಸರ್ಕಾರದ ಲೆಕ್ಕದಲ್ಲಿಲ್ಲವೇ ? ದಯವಿಟ್ಟು ತಿಳಿಸಬೇಕು.

ಶ್ರೀ ಮೊಹಮ್ಮದ್ ಮೊಹಿಸುದ್ದೀನ್.— ಮಾನ್ಯ ಉಪಾಧ್ಯಕ್ಷರೇ, ಅವರ ಪ್ರಶ್ನೆ ಇರುವುದು ''ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತೆಲಗಿ ಮತ್ತು ಕಮತಹಳ್ಳಿ ಗ್ರಾಮಗಳಲ್ಲಿರುವ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದೇ ?'' ಈ ರೀತಿ ಅವರ ಪ್ರಶ್ನೆ ಇರುವುದು. ಅದಕ್ಕೆ ಉತ್ತರವಾಗಿ ''ಇಲ್ಲ'' (ಸರ್ಕಾರದ ಪರಿಶೀಲನೆಯಲ್ಲಿಲ್ಲ'') ಎಂದು ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್ — ಆಸ್ಪತ್ರೆ ನಿಮ್ಮ ಲೆಕ್ಕದಲ್ಲಿ ಇಲ್ಲ ಎಂದು ಹೇಳಿದರೆ ಬಾಗಿಲು ಮುಚ್ಚಿಕೊಂಡು ಹೋಗಿ ಆ ಆಸ್ಪತ್ರೆಯ ಬಾಗಿಲನ್ನು ಮುಚ್ಚಿಬಿಡಿ. ಅದು ಲೆಕ್ಕದಲ್ಲಿ ಇಲ್ಲ ಎಂದು ಹೇಳಿದರೆ ಅದು ಏತಕ್ಕೆ ಬೇಕು ?

ಉಪಾಧ್ಯಕ್ಷರು.— ಅದನ್ನು ಅಪ್-ಗ್ರೇಡ್ ಮಾಡುತ್ತೀರಾ ಹೇಗೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಬಿ ಹೆಚ್. ಯಂಕಾನಾಯಕ್.— ಅಲ್ಲಿ ಆಸ್ಪತ್ರೆ ಸರ್ಕಾರಿ ಲೆಕ್ಕದಲ್ಲಿ ಇದೆಯೋ ಇಲ್ಲವೇ ಅಲ್ಲಿ ಇನ್ಸ್‌ಪೆಕ್ಟರಾಗಿ ಸಂಬಳ ಕೊಡುತ್ತಿದ್ದಾರೆ. ಪ್ಯೂನ್‌ಗೆ ಸಂಬಳವನ್ನು ಕೊಡುತ್ತಿದ್ದಾರೆ. ಅಲ್ಲಿಗೆ ಔಷಧಿಗಳನ್ನು ಸಪ್ಲೈ ಮಾಡುತ್ತಿದ್ದೀರಾ ಹೇಗೆ ? ದಯವಿಟ್ಟು ತಿಳಿಸಿ. ಲೆಕ್ಕದಲ್ಲಿಯೇ ಇಲ್ಲ ಎಂದು ಹೇಳಿದರೆ ಹೇಗೆ ? ಆ ರೀತಿ ಸರ್ಕಾರಿ ಲೆಕ್ಕದಲ್ಲಿಯೇ ಇಲ್ಲ ಎಂದು ಹೇಳಿದರೆ ಇರುವಂಥ ಆಸ್ಪತ್ರೆಯನ್ನು ಪಜಾ ಮಾಡಿ ಅಲ್ಲಿ ಕೊಡುತ್ತಿರುವ ಸಂಬಳವನ್ನು ಕೂಡಾ ನಿಲ್ಲಿಸಿ.

ಉಪಾಧ್ಯಕ್ಷರು.— ಇರುವಂಥ ಆಸ್ಪತ್ರೆ ಸರ್ಕಾರಿ ಆಸ್ಪತ್ರೆಯೇ ಏನು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಮೊಹಮ್ಮದ್ ಮೊಹಿಸುದ್ದೀನ್.— ಅದು ಜಿಲ್ಲಾ ಪರಿಷತ್ತು ಕಾರ್ಯ ವ್ಯಾಪ್ತಿಗೆ ಬರುತ್ತದೆ. ಮಾನ್ಯ ಸದಸ್ಯರು ಕೂಡಾ ಅಲ್ಲಿ ಮೆಂಬರ್ ಆಗಿದ್ದಾರೆ. ಜಿಲ್ಲಾಪರಿಷತ್‌ನಲ್ಲಿ ಅವರಿಗೆ ಒತ್ತಾಯಪಡಿಸಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಹೆಚ್. ಯಂಕಾನಾಯಕ್,— ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದು ಎಷ್ಟು ವರ್ಷ ಆಯಿತು. ಆಸ್ಪತ್ರೆ ಬಂದು ಎಷ್ಟು ವರ್ಷ ಆಯಿತು. ಅದು ನಿಮ್ಮ ಲೆಕ್ಕದಲ್ಲಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ತಾವು ಸ್ವಲ್ಪ ಜವಾಬ್ದಾರಿಯನ್ನು ಇಟ್ಟುಕೊಂಡು ಹೇಳಿ. ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದು ಒಂದು ಅಥವಾ ಎರಡು ವರ್ಷ ಆಯಿತು. ಆಸ್ಪತ್ರೆ ಬಂದು ೧೮ ವರ್ಷವಾಗಿದೆ. ಅಲ್ಲಿ ಡಾಕ್ಟರ್ಸ್ ಇಲ್ಲ.

ಉಪಾಧ್ಯಕ್ಷರು.— ದಯವಿಟ್ಟು ಕೂಡಿ. ಅವರು ಉತ್ತರ ಹೇಳಲಿ.

ಶ್ರೀ ಬಿ. ಹೆಚ್. ಯಂಕಾನಾಯಕ್.— ಎಷ್ಟು ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ. ಅಲ್ಲಿ ಡಾಕ್ಟರ್ಸ್ ಇಲ್ಲ.

ಉಪಾಧ್ಯಕ್ಷರು.— ನಾಯಕರೇ, ದಯವಿಟ್ಟು ಕೂಡಿ.

ಶ್ರೀ ಬಿ. ಹೆಚ್. ಯಂಕಾನಾಯಕ್.— ನಿಮ್ಮ ಲೆಕ್ಕದಲ್ಲಿ ಇದೆಯೋ ಇಲ್ಲವೋ ಅದನ್ನು ಹೇಳಿ. ಆಸ್ಪತ್ರೆ ಬಂದು ೧೮ ವರ್ಷ ಆಯಿತು.

ಶ್ರೀ ಮಹಮ್ಮದ್ ಮೊಯಿನುದ್ದೀನ್.— ಆಸ್ಪತ್ರೆ ಬಂದು ೧೮ ವರ್ಷ ಆಗಿರಬಹುದು. ಆದರೆ ಪ್ರಶ್ನೆ ಮಾತ್ರ ಈ ವರ್ಷ ಬಂದಿದೆ. ಅದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಹೋದ ವರ್ಷದಿಂದ ಬಂದಿದೆ. ಅವರೇ ಅದನ್ನು ನೋಡಿಕೊಳ್ಳುತ್ತಾರೆ.

ಶ್ರೀ ಕೆ. ಪಿಟ್. ಪಾಟೀಲ್.— ಮಾನ್ಯ ಯಂಕಾನಾಯಕ್ ಅವರ ಮನಸ್ಸಿನಲ್ಲಿ ಏನು ಇದೆ ಅದನ್ನು ಅರ್ಥ ಮಾಡಿಕೊಳ್ಳಬೇಕು. ೧೮ ವರ್ಷ ಆದರೂ ಆಸ್ಪತ್ರೆಗೆ ಡಾಕ್ಟರ್ ಇಲ್ಲ. ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದು ಒಂದೆರಡು ವರ್ಷವಾಗಿದೆ. ನೀವು ಜಿಲ್ಲಾಪರಿಷತ್‌ಗೆ ಒಂದು ಲೆಟರ್ ಬರೆದು ಇದು

ಜರೂರು ಆಗಿ ಆಗಬೇಕು ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇದೆ ಎಂದೂ ಹೇಳಿ. ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಪ್ರಾಶಸ್ತ್ಯವನ್ನು ಕೊಡಿ ಎಂದೂ ಬರೆಯಿರಿ.

ಶ್ರೀ ಮಹಮದ್ ಮೊಯಿನುದ್ದೀನ್.— ಆಗಬಹುದು.

ಉಪಾಧ್ಯಕ್ಷರು.— ನಾಯಕರೇ, ಕೂಡಿ, ಪದೇ ಪದೇ ತಮ್ಮಿದನ್ನು ಮಾತ್ರ ಕೇಳುವುದಕ್ಕೆ ಆಗುವುದಿಲ್ಲ. Don't take it on record.

ಶ್ರೀ ಬಿ. ಹೆಚ್. ಯಂಕಾನಾಯಕ್.— ನಾನೂ ಏಕೆ ಕೂಡಬೇಕು. ಈ ವಿಷಯದಲ್ಲಿ ನನಗೆ ಕೇಳುವುದಕ್ಕೆ ಹಕ್ಕು ಇದೆ.

ಉಪಾಧ್ಯಕ್ಷರೂ.— ನಿಮ್ಮ ಪ್ರಶ್ನೆಗೆ ಉತ್ತರ ಹೇಳಿದ್ದಾರೆ, ದಯವಿಟ್ಟು ಕೂಡಿ.

ಶ್ರೀ ಬಿ. ಹೆಚ್. ಯಂಕಾನಾಯಕ್.— ಕೂಡುವುದಿಲ್ಲ. ದಯವಿಟ್ಟು ನಮ್ಮ ಪ್ರಶ್ನೆಗೆ ಉತ್ತರ ಹೇಳಲಿ, ಅವರು ಉತ್ತರ ಹೇಳಿದ್ದು ನನಗೆ ಕೇಳಿಸಿಲ್ಲ.

ಉಪಾಧ್ಯಕ್ಷರು.— ಅವರಿಗೆ ಹೇಳಿದ್ದು ಕೇಳಿಸಲಿಲ್ಲ ಎಂದಿದ್ದಾರೆ, ಇನ್ನೊಮ್ಮೆ ಉತ್ತರ ಹೇಳಿ.

ಶ್ರೀ ಜೆ. ಹೆಚ್. ಪಟೇಲ್.— ಈಗ ಕೆ ಹೆಚ್. ಪಾಟೀಲ್‌ರವರು ಹೇಳಿದ್ದು ಕೇಳಿರಬೇಕು. ಈಗ ಆಸ್ಪತ್ರೆಯ ವಿಷಯವನ್ನು ಜಿಲ್ಲಾ ಪರಿಷತ್‌ಗೆ ವರ್ಗಾಯಿಸಲಾಗಿದೆ. ಜಿಲ್ಲಾ ಪರಿಷತ್‌ಗೆ ಸರ್ಕಾರ ಆದೇಶ ಕೊಡುತ್ತದೆ. ಆದಷ್ಟು ಬೇಗ ತೆಗೆದುಕೊಳ್ಳಲಿಕ್ಕೆ ಹೇಳುತ್ತೇವೆ. ಯಾವಾಗ ಡೇಟ್, ದಿನ ಯಾವುದು ಎಂದು ಹೇಳುವುದು ಕಷ್ಟವಾಗುತ್ತದೆ. ಮಾನ್ಯ ಸದಸ್ಯರ ಕಳಕಳಿ ಅರ್ಥ ಆಗಿದೆ. ಅವರು ಕೇಳಿರುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.— ಸರ್ಕಾರದ ಲೆಕ್ಕದಲ್ಲಿ ಇದೆಯೋ ಎಂದು ಕೇಳಂತ್ತಿದ್ದೇನೆ. ಜಿಲ್ಲಾ ಪರಿಷತ್ ಬಂದು ಒಂದೆರಡು ವರ್ಷ ಆಗಿದೆ, ಆಸ್ಪತ್ರೆಯು ವಿಷಯು ೧೮ ವರ್ಷದ್ದು.

ಶ್ರೀ ಕೆ. ವಿ. ರವೀಂದ್ರನಾಥಬಾಬು.— ಮಾನ್ಯ ಅಧ್ಯಕ್ಷರೇ ನಮ್ಮಲ್ಲಿ ಸಾಕಷ್ಟು ವೆಟರ್‌ನರಿ ಆಸ್ಪತ್ರೆಗಳೂ ಇವೆ. ಅವುಗಳ ಮಾಹಿತಿಗಳನ್ನು ತರಿಸಿಕೊಂಡು ನೋಡಿ ೨೦–೨೫ ವರ್ಷದಿಂದ ಪ್ರಾರಂಭ ಆಗಿ ಹಾಗೆಯೇ ನಿಂತಿದೆ. ಮೆಡಿಸಿನ್ಸ್ ಇಲ್ಲ, ಡಾಕ್ಟರ್ಸ್ ಇಲ್ಲ, ಮೊಬೈಲ್ ಆಸ್ಪತ್ರೆ ಸಹ ಅಲ್ಲಿ ಇಲ್ಲ. ಜಿಲ್ಲಾ ಪರಿಷತ್ ಅಧ್ಯಕ್ಷರಲ್ಲಿ ವಿಷಯ ಪ್ರಸ್ತಾಪಿಸಿದರೆ ನೀವು ಎಂ.ಎಲ್.ಎ.ಗಳು ಇದ್ದೀರಿ, ಸರ್ಕಾರದಲ್ಲಿ ಮಾಡಿಸಿಕೊಂಡು ಬನ್ನಿ ಎನ್ನುತ್ತಾರೆ. ಈ ರೀತಿ ಆಗಿದೆ. ನಾವು ಅವರಿಗೆ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.— ಜಿಲ್ಲಾ ಪರಿಷತ್‌ನಿಂದ ಆದು ಆಗುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್‌ನಲ್ಲಿ ರೊಕ್ಕ ಇಲ್ಲವೆಂದು ಸದಸ್ಯರು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು.— ಪ್ರತಾಪಚಂದ್ರ ಶೆಟ್ಟರೇ ದಯವಿಟ್ಟು ಕೂಡ್ರಿ.

ಶ್ರೀ ಎ. ಲಕ್ಷ್ಮೀಸಾಗರ್.— ನೀವು ಕುಳಿತುಕೊಳ್ಳಿರಿ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ನೀವು ಯಾರು ಆದನ್ನು ಹೇಳಲಿಕ್ಕೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಅವರು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಣ ಇಲ್ಲವೆಂದು ಇದನ್ನು ತೆಗೆದುಕೊಳ್ಳುತ್ತಿಲ್ಲವೋ ಅಥವಾ ಹಣದ ಕೊರತೆಯಿಂದ ತೆಗೆದುಕೊಳ್ಳುತ್ತಿಲ್ಲವೋ ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ. ದಯವಿಟ್ಟು ಇದನ್ನು ಯಾವ ರೀತಿ ಮಾಡುತ್ತೀರಿ ಎಂಬುದನ್ನು ಮಾತ್ರ ಹೇಳಿಬಿಡಿ.

ಶ್ರೀ ಜೆ. ಹೆಚ್. ಪಟೇಲ್.— ಮಾನ್ಯ ಸದಸ್ಯರು ಜಿಲ್ಲಾ ಪರಿಷತ್‌ನಲ್ಲಿ ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಈ ಬಗ್ಗೆ ಸರ್ಕಾರದಿಂದ ಅಲ್ಲಿನ ಜಿಲ್ಲಾ ಪರಿಷತ್‌ಗೆ ಆದೇಶ ಕೊಟ್ಟ ಮೇಲೆ ಆದಷ್ಟು ಬೇಗ ಈ ಕೆಲಸವನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆ ಹಣಕಾಸಿನ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಮಾಡಬೇಕು ಎಂಬುದನ್ನು ಸಹ ಅವರಿಗೆ ತಿಳಿಸಲಾಗುತ್ತದೆ.

ಶ್ರೀ ಕೆ. ವಿ. ರವೀಂದ್ರನಾಥಬಾಬು.— ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ ?

ಶ್ರೀ ಜೆ. ಹೆಚ್. ಪಟೇಲ್.— ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಮಂತ್ತು ಮಾನ್ಯ ಪಾಟೀಲ್ ಅವರು ಕೇಳಿದ ಪ್ರಶ್ನೆಗಳಿಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದರಿಂದ ಅವರಿಗೆ ಸಮಾಧಾನವಾಗಿದೆ. ಆದರೂ ಸಹ ಇದನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದರೆ ಹೇಗೆ ? ಲೋಕ ಸಭೆಯಲ್ಲಿಯಾಗಲೀ ಆಥವಾ ಹೌಸ್ ಆಫ್ ಕಾಮನ್ಸ್‌ನಲ್ಲಿಯಾಗಲೀ ಈ ರೀತಿಯಲ್ಲಿ ನಡೆಯುವುದಿಲ್ಲ. ಈ ಕೆಲಸಕ್ಕೆ ಹಣ ಯಾವ ರೀತಿ ಕೊಡುತ್ತೀರಿ ಎಂದು ಕೇಳಿದರೆ ಹೇಗೆ ? ಮಾನ್ಯ ಉಪಾಧ್ಯಕ್ಷರೇ, ತಮ್ಮಲ್ಲಿ ಅತ್ಯಂತ ವಿನಯಪೂರ್ವಕವಾಗಿ ಈ ಬಗ್ಗೆ ಕೇಳಿಕೊಳ್ಳುವುದು ಇಷ್ಟೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ. ಇದರ ಜೊತೆಗೆ ಹಣದ ತೊಂದರೆ ಏನಾದರೂ ಇದ್ದರೆ, ಯಾವ ಯಾವ ಜಿಲ್ಲೆಗಳಲ್ಲಿ ಈ ಕೆಲಸವನ್ನು ಮೊದಲು ಆದ್ಯತೆಯ ಮೇಲೆ ಪ್ರೈಯಾರಿಟಿ ಕೊಟ್ಟು ಮಾಡಬೇಕು ಎಂಬುದನ್ನು ಸಹ ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಮತ್ತೆ ಇನ್ನು ಏನು ಉತ್ತರ ಕೊಡಬೇಕು ?

ಶ್ರೀ ಕೆ. ವಿ. ರವೀಂದ್ರನಾಥಬಾಬು.— ನಾನು ಯಾವಾಗ ಮಾಡುತ್ತೀರಿ ಎಂದು ಕೇಳಲಿಲ್ಲ. ನನ್ನ ಪ್ರಶ್ನೆಗೆ ಉತ್ತರಬೇಕು ಎಂದು ಮಾತ್ರ ಕೇಳಿದೆ.

ಶ್ರೀ ಮೊಹಮದ್ ಮೊಹಿನುದ್ದೀನ್.— ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಉತ್ಪಾದನೆಗಳ ಗುಣಮಟ್ಟದ ಬಗ್ಗೆ

೨೧೯೯. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ಸ್ ಉದ್ಯಮದವರು ತಯಾರಿಸುತ್ತಿರುವ ಉತ್ಪಾದನೆ ಮತ್ತು ಅದರ ಪ್ರಮಾಣವೆಷ್ಟು (ವರ್ಷವಾರು ವಿವರ ನೀಡುವುದು)

ಆ) ಸದರಿ ಅವಧಿಯಲ್ಲಿ ಈ ಉದ್ಯಮಕ್ಕೆ ಆದ ಹಾನಿ ಅಥವಾ ಆ ಭವೆಷ್ಟು (ವರ್ಷವಾರು ವಿವರ ನೀಡುವುದು)

ಇ) ಹಾಲಿ ಕೆಲಸ ಮಾಡುತ್ತಿರುವ ಕಾರ್ಮಿಕ ಹಾಗೂ ಇತರ ಸಿಬ್ಬಂದಿ ವರ್ಗದ ಸಂಖ್ಯೆಯೆಷ್ಟು (ವರ್ಗವಾರು ವಿವರ ನೀಡುವುದು) ಪ್ರತಿ ತಿಂಗಳು ವಿತರಣೆಯಾಗುವ ಸ್ಥಳೀಯ ವಿತರಣೆಗಳೆಷ್ಟು ?

ಈ) ಸದರಿ ಉದ್ಯಮ ಉತ್ಪಾದನಾ ಸಾಮರ್ಥ್ಯವನ್ನು ಪೂರ್ಣವಾಗಿ ವಿನಿಯೋಗಿಸಿ ಕೊಳ್ಳುತ್ತಿದೆಯೇ ?

ಉ) ಹಾಲಿ ಇರುವ ದಾಸ್ತಾನು ಹಾಗೂ ಅದರ ಬೆಲೆ ಎಷ್ಟು ?

ಊ) ಸದರಿ ಉದ್ಯಮವು ಲಾಭ ಪಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?